ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಶುಕ್ರವಾರ, ದಿನಾಂಕ : 29 ನೇ ಜನವರಿ, 2021

ಸ್ವಚ್ಛ ಭಾರತ್ (ಗ್ರಾಮೀಣ) ಅಭಿಯಾನ ಮತ್ತು `ಬಯಲು ಬಹಿರ್ದೆಶೆ ಮುಕ್ತ' ಗ್ರಾಮಗಳು ಕುರಿತು

ಶ್ರೀ ಕೆ. ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು) -

39 (26) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಸ್ವಚ್ಛ ಭಾರತ್ (ಗ್ರಾಮೀಣ) ಅಭಿಯಾನವನ್ನು ಪ್ರಾರಂಭಿಸುವ ಮುನ್ನ ಕೈಗೊಂಡಿರುವ ಒಟ್ಟಾರೆ ಗ್ರಾಮೀಣ ಸ್ವಚ್ಛತೆ ಎಷ್ಟು; ಮತ್ತು ಈ ಅಭಿಯಾನವನ್ನು ಪ್ರಾರಂಭಿಸಿದ ನಂತರ ಇದುವರೆವಿಗೂ ಸಾಧಿಸಲಾಗಿರುವ ಪ್ರಗತಿ ಎಷ್ಟು; (ಜಿಲ್ಲಾವಾರು ಮತ್ತು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಪ್ರಸ್ತುತ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಈ ಅಭಿಯಾನ ಅಡಿಯಲ್ಲಿ ದಿನಾಂಕ: 02-11-2020ರಂತೆ ಎಷ್ಟು ಮನೆಗಳಿಗೆ ಶೌಚಾಲಯ ನಿರ್ಮಿಸಿಕೊಡಲಾಗಿದೆ;

(ಇ) ರಾಜ್ಯಕ್ಕೆ `ಬಯಲು ಬಹಿರ್ದೆಶೆ ಮುಕ್ತ' ಸ್ವಚ್ಛತೆ ಕಾರ್ಯಕ್ರಮಗಳಲ್ಲಿ ನಿಗಧಿಪಡಿಸಿದ ಗುರಿಯೆಷ್ಟು; ಮತ್ತು ಯಾವ ಅವಧಿಯೊಳಗೆ ರಾಜ್ಯದಲ್ಲಿ ಈ ಅಭಿಯಾನದ ಅಡಿ ಶೇ.100ರಷ್ಟು `ಬಯಲು ಬಹಿರ್ದೆಶೆ ಮುಕ್ತ' ಸ್ವಚ್ಛತೆಯನ್ನು ಸಾಧಿಸಲಾಗುವುದು;

(ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಿರ್ಮಿಸಲಾದ ಶೌಚಾಲಯಗಳೆಷ್ಟು; (ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ `ಬಯಲು ಬಹಿರ್ದೆಶೆ ಮುಕ್ತ' ಗ್ರಾಮಗಳೆಂದು ಘೋಷಿತವಾಗಿರುವ ಗ್ರಾಮಗಳಲ್ಲಿ ಶೌಚಾಲಯ ನಿರ್ಮಾಣದ ಬಗ್ಗೆ ಸಮೀಕ್ಷೆ/ಗಣತಿಯ ವಿವರವನ್ನು ಜಿಲ್ಲಾವಾರು ಒದಗಿಸುವುದು?